

ಟೀವಿ, ಸಿನಿಮಾಗಳ ಜೊತೆ ಜೊತೆಗೆ ಮನರಂಜನೆಯ ದೊಡ್ಡ ಪೇಟೆಯೊಂದು ಜನಪ್ರಿಯಗೊಂಡಿದೆ. ನಗರಗಳ ಜೊತೆಗೆ ಗ್ರಾಮೀಣ ಪ್ರದೇಶಗಳ ಪ್ರತಿಭೆಗಳ ಅಭಿವ್ಯಕ್ತಿಗೆ ವೇದಿಕೆಯಾಗಿ ಯೂಟ್ಯೂಬ್ ಒದಗಿಬಂದಿದೆ. ಯೂಟ್ಯೂಬರ್ ಆಗುವುದು ಕೆಲವರಿಗೆ ಸಂಪಾದನೆಯ ದಾರಿಯೂ ಆಗಿದೆ. ಇವೆಲ್ಲ ವಿದ್ಯಮಾನಗಳು, ಮನರಂಜನೆಯ ಹೊಸ ಸಾಧ್ಯತೆಯೊಂದು ಅನಾವರಣಗೊಂಡಿರುವುದಕ್ಕೆ ಉದಾಹರಣೆಗಳಾಗಿವೆ. ಯೂಟ್ಯೂಬ್ ವೇದಿಕೆಗೆ ಕನ್ನಡದ ಜಾಣ ಜಾಣೆಯರೂ ತಮ್ಮನ್ನೊಡ್ಡಿಕೊಂಡಿದ್ದಾರೆ. ವಿಶೇಷವಾಗಿ, ಉತ್ತರ ಕರ್ನಾಟಕದ ಮಂದಿ ಯೂಟ್ಯೂಬ್ ವೇದಿಕೆಯಲ್ಲಿ ಹಾಸ್ಯವಲ್ಲರಿ ಅರಳಿಸಿ ಗೆಲ್ಲುತ್ತಿದ್ದಾರೆ. ಜವಾರಿ ಭಾಷೆಯ ಹಾಸ್ಯ ಪ್ರಸಂಗಗಳನ್ನು, ಮನರಂಜನೆಯ ಬೇರೆಯದೇ ವರಸೆಗಳನ್ನು ಬಯಲುಸೀಮೆಯವರೂ ಅಂಗೈ ಮೊಬೈಲ್ ಪರದೆಯ ಮೇಲೆ ನೋಡುತ್ತಾ ಸುಖಿಸುತ್ತಿದ್ದಾರೆ. ಕನ್ನಡದ ಕೆಲವು ಯೂಟ್ಯೂಬರ್‌ಗಳ ಹೆಜ್ಜೆಜಾಡನ್ನು ಹಿಡಿಯುವ 'ಸುಧಾ' ಪ್ರಯತ್ನ, ಮನರಂಜನಾ ಜಗತ್ತು ಪಡೆದುಕೊಂಡಿರುವ ಪಲ್ಲಟವನ್ನು ಗುರ್ತಿಸುವ ಪ್ರಯತ್ನವೂ ಆಗಿದೆ.

■ ವಿಶಾಖ ಎನ್.